

ಜುಲೈ 1 ವೈದ್ಯರ ದಿನಾಚರಣೆ

# ವೈದ್ಯನೂ.. ರೋಗಿಯೂ..

'ನಿಮ್ಮಲ್ಲಿ ಬರುವ ಪ್ರತಿಯೊಬ್ಬ ರೋಗಿಯನ್ನೂ ಗೌರವಿಸಬೇಕು' ಇದು ಎಲ್ಲಾ ವೈದ್ಯರೂ ತಮ್ಮ ವಿದ್ಯಾಭ್ಯಾಸದ ಸಮಯದಲ್ಲಿಯೇ ತಮ್ಮ ವೈದ್ಯ ಶಿಕ್ಷಕರಿಂದ ಮನನ ಮಾಡಿಕೊಂಡಿರುವ ಅಂಶ. ಅಂತೆಯೇ, ತಾವು ಕಲಿತ ವಿದ್ಯೆ ಹಾಗೂ ಅನುಭವಗಳ ಆಧಾರದ ಮೇಲೆ ರೋಗಿಯ ಕಾಯಿಲೆಗೆ ಅತ್ಯುತ್ತಮ ಔಷಧವನ್ನೇ ಕೊಡಲು ಅವರು ಪ್ರಯತ್ನಿಸುತ್ತಾರೆ.

■ ಡಾ.ವಿನಯ ಶ್ರೀನಿವಾಸ್

ವೈದ್ಯೋ ನಾರಾಯಣೋ ಹರಿಃ ಎಂಬುದು ಬಹು ಹಿಂದಿನಿಂದಲೂ ಪ್ರಚಲಿತದಲ್ಲಿರುವ ಮಾತು. ತಮ್ಮ ಆರೋಗ್ಯ ಸಮಸ್ಯೆಗಳನ್ನು ಪತ್ತೆ ಹಚ್ಚಿ ಗುಣಪಡಿಸುವ ವೈದ್ಯರು ನಿಜಕ್ಕೂ ದೇವರ ಸಮಾನ ಎಂದೇ ಬಹುತೇಕ ಜನರು ಭಾವಿಸುತ್ತಾರೆ. ಅಂತೆಯೇ ಪ್ರತಿಯೊಬ್ಬ ವೈದ್ಯರೂ ಸಹ ತಮ್ಮಲ್ಲಿಗೆ ಬರುವ ರೋಗಿಗಳ ಕಾಯಿಲೆಗಳನ್ನು ಗುಣಪಡಿಸುವಲ್ಲಿ ಗರಿಷ್ಠ ಪ್ರಯತ್ನವನ್ನು ಮಾಡುತ್ತಾರೆ. ರೋಗಿಯು ಅತಿ ಶೀಘ್ರ ಗುಣಮುಖನಾಗಲೆಂದೇ ಎಲ್ಲಾ ವೈದ್ಯರೂ ಆಶಿಸುತ್ತಾರೆ.

ಆರೋಗ್ಯ ಸಮಸ್ಯೆಗಳು ಸುಳಿದಾಗ ಜನ ವೈದ್ಯರಲ್ಲಿಗೆ ಹೋಗುತ್ತಾರಷ್ಟೆ. ಹಾಗೆ ಹೋಗುವಾಗ ಒಬ್ಬೊಬ್ಬರದ್ದು ಒಂದೊಂದು ಬಗೆಯ ನಿಲುವು! ಕೆಲವರು ಈ ಹಿಂದೆ ಇನ್ನೊಂದು ವೈದ್ಯರಲ್ಲಿ ಸಲಹೆ ಪಡೆದದ್ದನ್ನು ಹೇಳಬೇಕೋ ಬೇಡವೋ.. ಹಿಂದಿನ ವೈದ್ಯರು ಕೊಟ್ಟ ಚೀಟಿಯನ್ನು ತೋರಿಸಿದರೆ ಈ ವೈದ್ಯರು ಕುಪಿತರಾಗಬಹುದು.. ಹಿಂದಿನ ತಪಾಸಣೆಗಳ ವರದಿಯನ್ನು ಈ ವೈದ್ಯರಿಗೆ ತೋರಿಸಿದರೆ ಇವರು ತಪ್ಪಾಗಿ ಭಾವಿಸಬಹುದೇನೋ.. ನೋವು ತುಂಬಾ ಇದೆಯೆಂದು ಹೇಳಿದರೆ ಕೂಡಲೇ ಆಪರೇಷನ್ ಮಾಡಬೇಕೆಂದು ಹೇಳಿ ಬಿಟ್ಟರೆ...? ಹೀಗೆ..ಇನ್ನೂ ಹಲವಾರು ರೀತಿಯ ಸಂಶಯ ಹಾಗೂ ಗೊಂದಲಗಳು ರೋಗಿ ಮತ್ತು ರೋಗಿಯ ಕಡೆಯವರನ್ನು ಕಾಡಬಹುದು.

ಇನ್ನು ಕೆಲವರು ವೈದ್ಯರೊಂದಿಗೆ ಮನಬಿಚ್ಚಿ ಮಾತನಾಡಲೂ ಹಿಂಜರಿಯುತ್ತಾರೆ. ತಮ್ಮನ್ನು ಬಾಧಿಸುತ್ತಿರುವ ಆರೋಗ್ಯ ಸಮಸ್ಯೆಯ ಸಂಪೂರ್ಣ ವಿವರವನ್ನು ವೈದ್ಯರಲ್ಲಿ ನಿವೇದಿಸಿಕೊಳ್ಳಲು ಅನುಮಾನಿಸುತ್ತಾರೆ. ಆದರೆ, ಇದು ಚಿಕಿತ್ಸೆ ಕೊಡುವ ವೈದ್ಯರಿಗೂ ಹಾಗೂ ಚಿಕಿತ್ಸೆ ಪಡೆಯುವ ರೋಗಿಗೂ ಒಳ್ಳೆಯದಲ್ಲ. ವೈದ್ಯರು ಕಾಯಿಲೆಯನ್ನು ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆಯನ್ನು ಸೂಚಿಸಲು ಕಾಯಿಲೆಯ ಬಗ್ಗೆ ಸಂಪೂರ್ಣ ಮಾಹಿತಿ ಮತ್ತು ಕೆಲವು ತಪಾಸಣೆಗಳು ಅವಶ್ಯ ಬೇಕಾಗುತ್ತವೆ.

ವೈದ್ಯರಲ್ಲಿಗೆ ಹೋಗುವಾಗ ಈ ಕೆಳಗಿನ ಅಂಶಗಳನ್ನು ಸದಾ ಗಮನದಲ್ಲಿಡಿ:

* ಆದಷ್ಟೂ, ಕಾಯಿಲೆಯ ಆರಂಭಿಕ ಹಂತದಲ್ಲಿಯೇ ವೈದ್ಯರನ್ನು ಕಾಣಲು ಪ್ರಯತ್ನಿಸಿ.
* ನಿಮ್ಮನ್ನು ಬಾಧಿಸುವ ಎಲ್ಲಾ ಗುಣಲಕ್ಷಣಗಳನ್ನೂ ಹೇಳಿ.
* ನಿಮ್ಮ ಸಮಸ್ಯೆ ಶುರುವಾದದ್ದು ಎಂದಿನಿಂದ..ಯಾವಾಗ ಹೆಚ್ಚಾಗುತ್ತದೆ.. ಏನು ಮಾಡಿದಾಗ ಕಡಿಮೆಯಾಗುತ್ತದೆ ಎಂಬುದನ್ನು ತಿಳಿಸಿ.
* ಹಿಂದೆ ಈ ಸಮಸ್ಯೆಗಾಗಿ ಬೇರೆ ವೈದ್ಯರ ಸಲಹೆ ಪಡೆದಿದ್ದರೆ, ಅದರ